**ದಿನಾಂಕಃ 30.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ –**

ನಿಂಗರಾಜುವಿನ ಪ್ರತಿಯೊಂದು ವ್ಯವಹಾರಗಳು ನನಗೆ ಗೊತ್ತು ಎನ್ನುವುದು ಸರಿಯಲ್ಲ. ಆತನನ್ನು ರಕ್ಷಿಸುವ ಸಲುವಾಗಿ 'ಗೊತ್ತಿಲ್ಲ' ಎಂದು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆತ ನನ್ನ ಮುಂದೆ ನಿಪಿ 17(ಎ) ರಿಂದ 17(ಇ) ವರೆಗಿನ ಹೇಳಿಕೆಯನ್ನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

2. ಮೈಸೂರು ಮಿನಿ ವಿಧಾನ ಸೌಧದಲ್ಲಿ ಆರೋಪಿಯ ಕಛೇರಿ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಟ್ರಾಪ್ ಮಹಜರ್ ನ್ನು ಅದೇ ಕಛೇರಿಯಲ್ಲಿ ಮಾಡಲಾಗಿದೆ ಎಂದು. ಆರೋಪಿಯ ಕರ್ತವ್ಯಕ್ಕೆ ಸಂಬಂಧಪಟ್ಟಂತೆ ಅಲ್ಲಿ ಬೇರೆ ಯಾವುದೇ ಕಡತಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಿದ್ದಲಿಂಗಪುರದಲ್ಲಿ ನೆಲ ಮಹಡಿ ಮತ್ತು ಮೊದಲನೇ ಮಹಡಿ ಇರುವ ಸುಸರ್ಜಿತವಾಗಿರುವ ಗ್ರಾಮ ಪಂಚಾಯ್ತಿ ಕಛೇರಿ ಇದೆ ಎಂದು ಮಾಡಿದ ಸಲಹೆಗೆ ಸಾಕ್ಷಿ , ಆ ಕಛೇರಿಗೆ ನಾನು ಭೇಟಿ ನೀಡಿರುವುದಿಲ್ಲ ಎನ್ನುತ್ತಾರೆ. ತನಿಖಾ ಕಾಲದಲ್ಲಿ ಆರೋಪಿಯ ಕಛೇರಿ ಎಲ್ಲಿತ್ತು ಎನ್ನುವ ಬಗ್ಗೆ ನಾನು ಯಾವುದೇ ದಾಖಾಲತಿಗಳನ್ನು ಸಂಗ್ರಹಿಸಿರುವುದಿಲ್ಲ. ಆ ಮಿನಿ ವಿಧಾನ ಸೌಧದಲ್ಲಿ ಇದ್ದತಹ ಕೊಠಡಿ ಸಂಖ್ಯೆ 8 ಕ್ಕೂ ಮತ್ತು ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ. ಮಿನಿ

ವಿಧಾನ ಸೌಧದ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ ಎನ್ನುವುದು ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ , ಮಹಜರ್ ಕಾಲದಲ್ಲಿ ತಹಸೀಲ್ದಾರರು ಯಾವ ಸಿಸಿ ಕ್ಯಾಮರಾಗಳು ಸಹ ಚಾಲ್ತಿಯಲ್ಲಿರುವುದಿಲ್ಲ ಎಂದು ತಿಳಿಸಿರುತ್ತಾರೆ, ಈ ಬಾಬ್ತು ನಾನು ಮಹಜರ್ ನಲ್ಲಿ ನಮೂದಿಸಿರುತ್ತೇನೆ ಎನ್ನುತ್ತಾರೆ. ನಕಾಶೆಯ ಪ್ರಕಾರ ನೀವು ಟ್ರಾಪ್ ಮಾಡಿದಿರಿ ಎಂದು ಹೇಳಲಾದ ಸ್ಥಳ ಪ್ಯಾಸೇಜ್ ಆಗಿರುತ್ತದೆ ಎನ್ನುವುದು ಸರಿಯಲ್ಲ. ಆರೋಪಿಯನ್ನು ನಾವು ಟ್ರಾಪ್ ಮಾಡಿದ್ದು ಮಿನಿ ವಿಧಾನ ಸೌಧದ ಕೊಠಡಿ ಸಂಖ್ಯೆ 8 ರಲ್ಲಿ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಿಸಿ ಕ್ಯಾಮರಾಗಳು ಚಾಲ್ತಿಯಲ್ಲಿ ಇರುತ್ತವೋ ಇಲ್ಲವೋ ಎನ್ನುವ ಬಗ್ಗೆ ನಾನು ಖುದ್ದು ಪರಿಶೀಲಿಸಿರುವುದಿಲ್ಲ. ಏಕೆಂದರೆ ತಹಸೀಲ್ದಾರರು ಯಾವ ಸಿಸಿ ಕ್ಯಾಮರಾಗಳು ಸಹ ಚಾಲ್ತಿಯಲ್ಲಿ ಇರುವುದಿಲ್ಲ ಎಂದು ಹೇಳಿದ್ದರಿಂದ. ಅಲ್ಲಿ ಅಳವಡಿಸಲಾಗಿದ್ದ ಎಲ್ಲಾ ಸಿಸಿ ಕ್ಯಾಮರಾಗಳು ಸಹ ಚಾಲ್ತಿಯಲ್ಲಿದ್ದವು ಎನ್ನುವುದು ಸರಿಯಲ್ಲ. ಅವುಗಳಲ್ಲಿದ್ದ ದೃಶ್ಯಗಳನ್ನು ತೆಗೆದಲ್ಲಿ ನಮ್ಮ ಪ್ರಕರಣಕ್ಕೆ ವಿರುದ್ಧವಾಗುತ್ತದೆ ಎನ್ನುವ ಕಾರಣಕ್ಕಾಗಿ ಆ ಸಿಸಿ ಕ್ಯಾಮರಾಗಳು ಚಾಲ್ತಿಯಲ್ಲಿ ಇರಲಿಲ್ಲ ಎನ್ನುತ್ತಿದ್ದೇನೆ ಎನ್ನುವುದು ಸರಿಯಲ್ಲ. ದೋಷಾರೋಪಣೆ ಪಟ್ಟಿಯ ಪುಟ ಸಂಖ್ಯೆ 45 ರಲ್ಲಿ ಕಂಡು ಬರುವ ಕರಡು ನಕಾಶೆಯಲ್ಲಿ , ಕೊಠಡಿ ಸಂಖ್ಯೆ 8 ರಲ್ಲಿ ಯಾವುದೇ ಘಟನೆ ನಡೆದ ಬಗ್ಗ ಕಾಣ ಬರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , ಆರೋಪಿಯು ಚಾ,ಸಾ. 1 ರಿಂದ ಲಂಚದ ಹಣವನ್ನು ಸ್ವೀಕರಿಸಿದ ಸ್ಥಳದ ಬಗ್ಗೆ ನಕ್ಷೆಯನ್ನು ತಯಾರಿಸಲಾಗಿದೆ ಎನ್ನುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3. ದೋಷಾರೋಪಣೆ ಪಟ್ಟಿಯ ಪುಟ ಸಂಖ್ಯೆ 28 ರಲ್ಲಿ ಅಂದರೆ ನಿಪಿ 23 ರಲ್ಲಿ 'ರವಾನೆ ಸಹಾಯಕ ' ಎಂದಿರುವ ಮೊಹರಿನ ಮೇಲೆ ದಿನಾಂಕವನ್ನು ತಿದ್ದಲಾಗಿದೆ ಎಂದು ಮಾಡಿದ ಸಲಹೆಗೆ ಸಾಕ್ಷಿ , 'ಸರಿ ' ಎನ್ನುತ್ತಾರೆ. ಅದರಲ್ಲಿ ನಿಯೋಜನೆ ಮಾಡಿದ ಅಧಿಕಾರಿಯ ಹೆಸರು ಮತ್ತು ಹುದ್ದೆಯನ್ನು ಖಾಲಿ ಬಿಡಲಾಗಿದೆ ಎನ್ನುವುದು ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ ಬಲ ಭಾಗದಲ್ಲಿ Administrative Officer ಎಂಬ ಮೊಹರಿನ ಮೇಲೆ ಸಹಿ ಮಾಡಿರುತ್ತಾರೆ ಎಂದು.

4. ನಿಪಿ 13 ರರಲ್ಲಿ ವಿವರಿಸಲಾದ ನಡವಳಿಕೆಗಳಂತೆ ಅಲ್ಲಿ ವಹಿಸುವಿಕೆ ಮಹಜರ್ ನ್ನು ಜರುಗಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಪಂಚರಿಗೆ ದೂರನ್ನು ಓದಲು ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. ಅಲ್ಲಿ ಎಲ್ಲರು ಕೈ ತೊಳೆದುಕೊಂಡ ಸಮಯದಲ್ಲಿ ಪೋಟೋಗಳನ್ನು ತೆಗೆಸಿರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , ಪ್ರಮುಖ ಸಂಧರ್ಬಗಳಲ್ಲಿ ಮಾತ್ರವೇ ಪೋಟೋಗಳನ್ನು ತೆಗೆಸಲಾಗಿದೆ ಎಂದು. ನಾವುಗಳು ಯಾರು ಕೈ ತೊಳೆದುಕೂಳ್ಳದೇ ಇದ್ದುದ್ದರಿಂದ, ಅದು ಪ್ರಮುಖ ಸಂಧರ್ಬವಾಗಿದ್ದರು ಸಹ, ನಾನು ಪೋಟೋ ತೆಗೆಸಿರುವುದಿಲ್ಲ ಎನ್ನುವುದು ಸರಿಯಲ್ಲ.

5. ಅಂಗ ಶೋದನೆ ಮಾಡಿಕೊಂಡ ಬಗ್ಗೆ , ಮಾಡಿದ ಬಗ್ಗೆ , ಪ್ರತ್ಯೇಕ ಪಟ್ಟಿಯನ್ನು ಮಾಡಿರುವುದಿಲ್ಲ.

6. ದೂರುದಾರ ಯಾವುದೇ ಮೊಬೈಲ್ ಚಿಪ್ಪನ್ನು ಹಾಜರುಪಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 13 ಪ್ರಾಯೋಗಿಕ ಪಂಚ ನಾಮೆಯಲ್ಲಿ ದೂರುದಾರರ ಬಳಿ ಇಂತಹ ನಂಬರಿನ ಮೊಬೈಲ್ ಇತ್ತು ಎನ್ನುವ ಬಗ್ಗೆ ನಮೂದಿಸಿರುವುದಿಲ್ಲ. ಆತನ ಬಳಿಯಲ್ಲಿ

ಯಾವುದೇ ಮೊಬೈಲ್ ಇಲ್ಲದೇ ಇದ್ದುದ್ದರಿಂದ ಆತ ಯಾವುದೇ ಚಿಪ್ಪನ್ನು ಹಾಜರುಪಡಿಸದೇ ಇದ್ದುದ್ದರಿಂದ , ಈ ಬಗ್ಗೆ ನಿಪಿ 13 ರಲ್ಲಿ ನಮೂದಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

7. ಆರ್ಟಿಕಲ್ 4 ಮತ್ತು 4(ಎ) ಸಿಡಿ ಗಳು ನೈಜ ಸಿಡಿಗಳಾಗಿರುವುದಿಲ್ಲ ಎನ್ನುವುದು ಸರಿಯಲ್ಲ. ಅವುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ನಿಪಿ 13 ರಲ್ಲಿ , ಮೊಬೈಲ್ ಚಿಪ್ಪಿನಲ್ಲಿದ್ದ ಸಂಭಾಷಣೆಯನ್ನು ಲಿಪಿಕರಣಗೊಳಿಸಿರುವುದು ನೈಜ್ಯವಾದುದಲ್ಲ ಎನ್ನುವುದು ಸರಿಯಲ್ಲ. ಆ ಸಂಭಾಷಣೆಗೂ , ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ. ಚಾ,ಸಾ. 1 ಮತ್ತು 3 ರವರಿಗೆ ನಾನು ಯಾವುದೇ ರೀತಿಯ ಸೂಚನೆಗಳನ್ನು ನೀಡಿರಲಿಲ್ಲ ಎನ್ನುವುದು ಸರಿಯಲ್ಲ. ನಿಪಿ 3 ರಿಂದ 7 ಪೋಟೋಗಳು ನೈಜ್ಯ ದಾಖಲಾತಿಗಳಲ್ಲ ಎನ್ನುವುದು ಸರಿಯಲ್ಲ.

8. ಮಿನಿ ವಿಧಾನ ಸೌಧದ ಬಳಿಗೆ ಹೋದಾಗ ಸಂಜೆ 06.30 ಆಗಿತ್ತು. ದೂರುದಾರ ಸೂಚನೆ ಕೊಟ್ಟಾಗ ಸಂಜೆ 06.55 ಆಗಿತ್ತು. ಅಲ್ಲಿ ಚಾ.ಸಾ. 1 ಮತ್ತು 3 ರವರು ಭೂಮಿ ಕೇಂದ್ರ ಕಛೇರಿಯ ಒಳಗೆ ಹೋಗಿರುವುದಿಲ್ಲ ಎನ್ನುವುದು ಸರಿಯಲ್ಲ. ದೂರುದಾರರು ಯಾವುದೇ ರೀತಿಯ ಸೂಚನೆ ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. ಫಿರ್ಯಾದುದಾರರಿಂದ ಆರೋಪಿ ಹಣವನ್ನು ಪಡೆದ ನಂತರ , ಫಿರ್ಯಾದುದಾರರು ಮತ್ತು ನೆರಳು ಸಾಕ್ಷಿ ಇಬ್ಬರು ಕಛೇರಿಯಿಂದ ಹೊರ ಬಂದು ತಲೆ ಸವರಿಕೊಳ್ಳುವುದರ ಮೂಲಕ ಸೂಚನೆಯನ್ನು ಕೊಟ್ಟಿದ್ದರು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

9. ಫಿರ್ಯಾದುದಾರ ಆರೋಪಿಯನ್ನು ಗುರುತಿಸಿ ನನಗೆ ತೋರಿಸಿದ ನಂತರ , ನಮ್ಮ ಸಿಬ್ಬಂದಿಗಳು ಆರೋಪಿಯ ಎರಡೂ ಕೈಗಳನ್ನು ಹಿಡಿದುಕೊಂಡರು. ಆರೋಪಿಯನ್ನು

ನನ್ನ ವಶಕ್ಕೆ ಪಡೆಯುವ ಮೊದಲು ತಹಸಿಲ್ದಾರ್ ರಿಗೆ ಮನವಿಯನ್ನು ಕೊಟ್ಟು ಅನುಮತಿಯನ್ನು ಪಡೆಯಲಿಲ್ಲ. ಆರೋಪಿ ನನ್ನಿಂದ ತಪ್ಪಿಸಿಕೂಂಡು ಹೋಗಲು ಪ್ರಯತ್ನ ಪಟ್ಟಿರುವುದಿಲ್ಲ. ಫಿರ್ಯಾದುದಾರರು ಮತ್ತು ನೆರಳು ಸಾಕ್ಷಿ ಯಾವುದೇ ವಿಷಯಗಳನ್ನು ನನಗೆ ತಿಳಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

10. ದೂರುದಾರರು ಕಛೇರಿಯ ಒಳಗೆ ಹೋಗುವಾಗ ವಾಯ್ಸು ರೆಕಾರ್ಡರ್ ನ್ನು ಆನ್ ಮಾಡಿಕೂಂಡು ಹೋಗಿದ್ದರು. ಅದನ್ನು ಪುನಃ ನನಗೆ ವಾಪಾಸ್ಸು ಕೊಡುವಾಗ ಅದು ಆಫ್ ಆಗಿತ್ತು. ನಾನು ದೂರುದಾರರಲ್ಲಿ , ಇದನ್ನು ಯಾವ ಸಂದರ್ಭದಲ್ಲಿ ಆಫ್ ಮಾಡಿದಿರಿ ಎಂದು ವಿಚಾರಿಸಿರುವುದಿಲ್ಲ. ನಿಪಿ 15 ಟ್ರಾಪ್ ಮಹಜರ್ ನ ಪುಟ ಸಂಖ್ಯೆ 2 ರ ಪ್ಯಾರಾ 2 ರಲ್ಲಿ "................ನನ್ನಿಂದ ರೂ.40,000/- ಲಂಚದ ಹಣ ಕೊಡಬೇಕೆಂದು ಬೇಡಿಕೆ ಇಟ್ಟು , ................"ಎಂದಿದೆ ಎನ್ನುವುದು ಸರಿ . ಸದರಿ ಮಹಜರ್ ನ 6 ನೇ ಪುಟದಲ್ಲಿ ಅವರ ನಡುವೆ ನಡೆದ ಸಂಭಾಷಣೆಯನ್ನು ಲಿಪಿಕರಣಗೊಳಿಸಲಾಗಿದೆ ಎನ್ನುವುದು ಸರಿ . ಅಲ್ಲಿರುವ ಸಂಭಾಷಣೆಯಲ್ಲಿ ಆರೋಪಿ ರೂ. 40,000/- ಗಳಿಗೆ ಬೇಡಿಕೆ ಇಟ್ಟಿರುವ ಬಗ್ಗೆ ಕಂಡು ಬರುವುದಿಲ್ಲ ಎನ್ನುವುದು ಸರಿ. "ಆದಷ್ಟು ಬೇಗ ರಿಪೊ ರ್ಟನ್ನು ನೀಡುವುದಾಗಿ ತಿಳಿಸಿ .... ........ " ಎನ್ನುವುದು ಸಂಭಾಷಣೆಯ ಲಿಪಕರಣದಲ್ಲಿ ಕಂಡು ಬರುವುದಿಲ್ಲ ಎನ್ನುವುದು ಸರಿ. ಈ ವ್ಯತ್ಯಾಸವನ್ನು ಪರಿಶೀಲಿಸಿದ ನಂತರ ನಾನು ದೂರುದಾರ ಮತ್ತು ನೆರಳು ಸಾಕ್ಷಿಯನ್ನು ವಿಚಾರಿಸಿರುವುದಿಲ್ಲ. ಆರೋಪಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರಲಿಲ್ಲ ಮತ್ತು ಪಡೆದಿರಲಿಲ್ಲ ಎನ್ನುವುದು ನಿಖರವಾಗಿ ಗೊತ್ತಿದ್ದರಿಂದ ನಾನು ಮೇಲ್ಕಂಡ ವ್ಯತ್ಯಾಸದ ಬಗ್ಗೆ ದೂರುದಾರ ಮತ್ತು ನೆರಳು ಸಾಕ್ಷಿಯನ್ನು ವಿಚಾರಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 15 ರಲ್ಲಿ

ನಮೂದಿಸಿರುವ ಪ್ರಕ್ರಿಯಯಂತೆ, ಪ್ರಕ್ರಿಯಗಳನ್ನು ನಡೆಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 15 ನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

11. ಆರೋಪಿ ತಾನು ನೀಡಿದ ಲಿಖಿತ ಸಮಜಾಯಿಶಿಯಲ್ಲಿ , ದೂರುದಾರ ನನಗೆ ಗೊತ್ತಾಗದಂತೆ ಒಂದು ಪೇಪರ್ ನ್ನು ನನ್ನ ಜೇಬಿಗೆ ಹಾಕಿದ , ನಾನು ಹಣ ಕೇಳಿಲ್ಲ ಮತ್ತು ಪಡೆದಿರುವುದಿಲ್ಲ ಎಂದು ಬರೆದುಕೊಟ್ಟಿರುತ್ತಾರೆ ಎನ್ನುವುದು ಸರಿ . ಆರೋಪಿ ಜೇಬಿನಿಂದ ಹಣ ತೆಗೆದುಕೊಟ್ಟಾಗ ಒಂದು ಪೇಪರ್ ಇದ್ದು , ಆ ಪೇಪರ್ ನ್ನು ನಾವೇ ಕೆಳಗೆ ಹಾಕಿದ್ದೆವು ಎಂದರೆ ಸರಿಯಲ್ಲ. ನೆರಳು ಸಾಕ್ಷಿ ಹಣ ಕೊಟ್ಟ ಬಗ್ಗೆ , ತೆಗೆದುಕೂಂಡ ಬಗ್ಗೆ ಏನನ್ನು ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ಆತ ಅವರಿಬ್ಬರ ನಡುವೆ ನಡೆದ ಸಂಭಾಷಣೆಯನ್ನು ಸಹ ಕೇಳಿರುವುದಿಲ್ಲ ಎಂದಿರುತ್ತಾನೆ ಎನ್ನುವುದು ಸರಿಯಲ್ಲ.

12. ಆರೋಪಿಯ ಪ್ಯಾಂಟ್ ನ ಜೇಬನ್ನು ಸೋಡಿಯಂ ಕಾರ್ಬೋನೇಟ್ ದಾರವಣದಲ್ಲಿ ಅದ್ದಿಸಿ ತೊಳೆದಿರುವುದಿಲ್ಲ ಎನ್ನುವುದು ಸರಿಯಲ್ಲ. ತಹಸೀಲ್ದಾರ್ ರಮೇಶ್ ಬಾಬು ರವರು ಆರೋಪಿಯ ಧ್ವನಿಯನ್ನು ಗುರುತಿಸಿರುವುದಿಲ್ಲ ಎನ್ನುವುದು ಸರಿಯಲ್ಲ . ತಹಿಸೀಲ್ದಾರ್ ರಮೇಶ್ ಬಾಬು ರವರಿಗೆ ದೋಷಾರೋಪಣೆ ಪಟ್ಟಿಯ ರ ಪುಟ ಸಂಖ್ಯೆ 54 ರಲ್ಲಿ ಲಿಪಿಕರಣಗೊಂಡಿರುವ ಸಂಭಾಷಣೆಯನ್ನು ಕೇಳಿಸಿ ಧ್ವನಿಯನ್ನು ಗುರುತಿಸಿಕೊಂಡಿರುತ್ತೇನೆ. ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ಸಂಭಾಷಣೆಯನ್ನು ಸಿಡಿಗೆ ವರ್ಗಾವಣೆ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಸಂಭಾಷಣೆಯನ್ನು ತಹಸೀಲ್ದಾರರಿಗೆ ಕೇಳಿಸಿದ್ದೆ. ಪ್ರಾಯೋಗಿಕ ಪಂಚ ನಾಮೆಯ ಕಾಲಕ್ಕೆ ಈಗ ಹೇಳಿದ ಸಿಡಿ ಅಂದರೆ ಆರ್ಟಿಕಲ್ 4 ಮತ್ತು 4(ಎ) ಯನ್ನು ಪ್ಯಾಕೆಟ್ ನಲ್ಲಿ ಹಾಕಿ ಮೊಹರು

ಮಾಡಿ ಅಮಾನತ್ತು ಪಡಿಸಿಕೊಂಡಿದ್ದೆವು ಎನ್ನುವುದು ಸರಿ. ನಂತರ ಅದನ್ನು ಠಾಣೆಯಲ್ಲಿ ಸುರಕ್ಷಿತವಾಗಿಟ್ಟು ಟ್ರಾಪ್ ಗೆ ಹೋಗಿದ್ದೆವು ಎನ್ನುವುದು ಸರಿ. ಆದ್ದರಿಂದ ತಹಸೀಲ್ದಾರ್ ರಿಗೆ ಸಂಭಾಷಣೆಯನ್ನು ಕೇಳಿಸಲು ನನ್ನ ಬಳಿ ಆರ್ಟಿಕಲ್ 4 , 4(ಎ) ಇರಲಿಲ್ಲ ಎನ್ನುವುದು ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅದನ್ನು ಆರೋಪಿಯಿಂದ ಓದಿಸಿ ರೆಕಾರ್ಡ ಮಾಡಿಕೊಂಡಿದ್ದೆವು . ಅದನ್ನು ತಹಸೀಲ್ದಾರ್ ರಿಂದ ಗುರುತಿಸಿಕೊಂಡೆ. ನಿಪಿ 15 ರಲ್ಲಿ ಈ ಬಗ್ಗೆ ನಮೂದಿಸಲಾಗಿದೆ. ಅದು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ಪಡೆದು ಅಮಾನತ್ತು ಪಡಿಸಿಕೊಂಡ ಸಿಡಿಗಳಲ್ಲಿದ್ದ ಸಂಭಾಷಣೆ ಆಗಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿಯ ಮಾದರಿ ಧ್ವನಿಯನ್ನು ಪಡೆಯಲು ನ್ಯಾಯಾಲಯದಿಂದ ಅನುಮತಿಯನ್ನೇನು ಪಡೆದಿರಲಿಲ್ಲ, ಆರೋಪಿಗೆ ಈ ಬಾಬ್ತು ನೋಟೀಸನ್ನು ಕೊಟ್ಟು ಒಪ್ಪಿಗೆ ಪಡೆದಿರುವುದಿಲ್ಲ. ಆರೋಪಿಯ ಮಾದರಿ ಧ್ವನಿಯನ್ನು ನಾವು ಪಡೆದ ಸಂಧರ್ಬದಲ್ಲಿ ಆತ ನಮ್ಮ ಬಂಧನದಲ್ಲಿದ್ದ ಎನ್ನುವುದು ಸರಿ. ಆರೋಪಿ ಮಾದರಿ ಧ್ವನಿಯನ್ನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

13. ಆರೋಪಿ ಯಾವುದೇ ದಾಖಲಾತಿಗಳನ್ನು ಖುದ್ದು ಹಾರುಪಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ದಿನವಾಗಲೀ ಅಥವಾ ನಂತರದ ದಿನಗಳಲ್ಲಾಗಲೀ ಕಂದಾಯ ನಿರೀಕ್ಷಕರ ಕಛೇರಿಗೆ ಹೋಗಿ ಅವರ ಕಛೇರಿಯಲ್ಲಿದ್ದ ದಾಖಾಲತಿಗಳು ಆರೋಪಿಯ ಕಛೇರಿಗೆ ಹೇಗೆ ಬಂದವು ಎನ್ನುವ ಬಗ್ಗೆ ವಿಚಾರಿಸಿರುವುದಿಲ್ಲ. ಕಂದಾಯ ನಿರೀಕ್ಷಕರ ಕಛೇರಿಯಿಂದಲೇ ಆ ದಾಖಲಾತಿಗಳನ್ನು ತರಿಸಿಕೊಂಡು ಅಮಾನತ್ತು ಪಡಿಸಿಕೊಂಡಿರುವುದರಿಂದ ಈ ಬಗ್ಗೆ ಅವರನ್ನು ವಿಚಾರಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

14. ನಿಪಿ 8 ರಿಂದ 10 ನೈಜ್ಯ ಭಾವ ಚಿತ್ರಗಳಾಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 15 ನ್ನು , ಅದರಲ್ಲಿ ನಮೂದಿಸಿರುವ ಸ್ಥಳದಲ್ಲಿ ತಯಾರಿಸಿರುವುದಿಲ್ಲ , ನಮ್ಮ ಠಾಣೆಯಲ್ಲಿ ತಯಾರಿಸಿರುತ್ತೇನೆ ಎನ್ನುವುದು ಸರಿಯಲ್ಲ.

15. ಕರಡು ನಕಾಶೆಯಲ್ಲಿ, ದೂರುದಾರ ಯಾವ ಸ್ಥಳದಲ್ಲಿ ನಿಂತು ನಮಗೆ ಸೂಚನೆಯನ್ನು ನೀಡಿದ್ದ ಎನ್ನುವುದನ್ನು ಗುರುತಿಸಿರುವುದಿಲ್ಲ.

16. ದಿಃ 15.07.2017 ರಂದು ಚಾ,ಸಾ. 1 , 2, 3, 4 , 5 , 8 , 9 , 11, 12 , 13 ರವರು ನನ್ನ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

17. ನಿಂಗರಾಜು ನ್ಯಾಯಾಲಯದ ಮುಂದೆ , ದೂರನ್ನು ನೀಡುವ 4 ದಿನಗಳ ಮುಂಚೆ ಸಿಸ್ಟರ್ ತೆರೇಸಾ ರವರನ್ನು ನೋಡಿದ್ದೆ ಎಂದು ಹೇಳಿರುವುದು ಸರಿಯಲ್ಲ. ನಿಪಿ 1 ಸ್ಟ್ಯಾಂಪ್ ಪೇಪರ್ ನ್ನು ಆತನೇ ಖರೀದಿಸಿರುತ್ತಾನೆ ಎಂದು ಹೇಳಿರುವುದು ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.